ಆ) ಮಧ್ಯಂತರ ವರದಿ ಪ್ರಕಾರ ವಿಜಾಪುರ ತಾಲ್ಲೂಕಿನಲ್ಲಿ ಸೂರ್ಯಕಾಂತಿ ಬೆಳೆಯು ಹೆಚ್ಚಿನ ತೇವಾಂಶದಿಂದಾಗಿ ಮೊಳಕೆ ಸರಿಯಾಗಿ ಬಂದಿರುವುದಿಲ್ಲ. ಸಿಂಧಗಿ ತಾಲ್ಲೂಕಿನಲ್ಲಿ ಸಜ್ಜೆ ಬೆಳೆಯಲ್ಲಿ ತೇವಾಂಶದ ಕೊರತೆಯಿಂದ ಮೊಳಕೆ ಸರಿಯಾಗಿ ಬಂದಿರುವುದಿಲ್ಲ.

ದೂರನ್ನು ಆಧರಿಸಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಮತ್ತು ಕೃಷಿ ಇಲಾಖೆಯ ಅಧಿಕಾರಗಳು ಮೊಳಕೆ ಬಾರದಿರುವ ತಾಕುಗಳಿಗೆ ಭೇಟಿ ನೀಡಿರುತ್ತಾರೆ. ಅವರ ವರದಿಯನ್ನು ನಿರೀಕ್ಷಿಸಲಾಗಿದೆ.
2. ಪ್ರಸ್ತುತ ಪ್ರಕರಣದಲ್ಲಿ ಬೀಜ ಕಾಯಿದೆ 1966ರ ಅಡಿಯಲ್ಲಿ ಬೀಜ ಉತ್ಪಾದಕರಾದ ಮೆ: ಮಹಿಕೊ ಮತ್ತು ಸಂಬಂಧಪಟ್ಟ ಬೀಜ ಮಾರಾಟಗಾರರಿಗೆ ನೋಟೀಸನ್ನು ಜಾರಿ ಮಾಡಲಾಗಿದೆ.

ವಿಜಾಪುರ ತಾಲ್ಲೂಕಿನ ಗ್ರಾಮಗಳಿಗೆ ಬಸ್ ಸಂಚಾರ

1748 - ಶ್ರೀ ಬಸವನಗೌಡ ರಾಮನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ತಾಲ್ಲೂಕಿನ ಎಷ್ಟು ಗ್ರಾಮಗಳಿಗೆ ಇದುವರೆವಿಗೂ ಬಸ್ ಸಂಚಾರ ಪ್ರಾರಂಭವಾಗಿಲ್ಲ? ಅವು ಯಾವುವು?

ಆ) ಅಂತಹ ಗ್ರಾಮಗಳಿಗೆ ಎಂದಿನಿಂದ ಬಸ್ ಸಂಚಾರ ಪ್ರಾರಂಭಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :

ಅ) ವಿಜಾಪುರ ತಾಲ್ಲೂಕಿನ ಎಲ್ಲಾ 108 ಗ್ರಾಮಗಳಿಗೂ ಬಸ್ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಹಿರೇಕೆರೂರು ತಹಶೀಲ್ದಾರ್ ಕಾರ್ಯಾಲಯಕ್ಕೆ ಕಂದಾಯ ಇಲಾಖೆಯಲ್ಲಿ ಬೋಜಾ ಕಡಿಮೆ ಮಾಡುವ ಕುರಿತು

1752 - ಶ್ರೀ ಉಜ್ಜೈನೇಶ್ವರ ಬಸವನಪ್ಪ ಬಣಕಾರ್ (ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ತಹಶೀಲ್ದಾರ್ ಕಾರ್ಯಾಲಯಕ್ಕೆ ಕಂದಾಯ ದಾಖಲೆಗಳಲ್ಲಿ ಬೋಜಾ ಕಡಿಮೆ ಮಾಡಲು ಬಂದ ಅರ್ಜಿಗಳು ಎಷ್ಟು? ಅವುಗಳ ವಿವರ ನೀಡುವುದು?

ಆ) 15.6.99ರ ವರೆಗೆ ಪ್ರತಿಯೊಂದು ಪ್ರಕರಣ ಯಾವ ಹಂತದಲ್ಲಿದೆ?

ಇ) ಅವುಗಳನ್ನು ನಿಕಾಲಿ ಮಾಡುವಲ್ಲಿ ಅನಾವಶ್ಯಕ ವಿಳಂಬ ಆಗಿರುವುದು ನಿಜವೇ?

ಈ) ಹಾಗಿದ್ದಲ್ಲಿ ಈ ರೀತಿ ಅರ್ಜಿಗಳನ್ನು ವಿಲೇ ಮಾಡಲು ಕಾಲಮಿತಿ ನಿಗದಿ ಮಾಡಲಾಗುವುದೇ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ)	ಬಂಡಿಂಗ್ ಬೋಜಾ ಕಡಿಮೆ ಬಗ್ಗೆ	7
	ಬ್ಯಾಂಕ್/ಸೊಸೈಟಿ ಬೋಜಾ	221
	ಪ್ರೀಮಿಯಂ ಬೋಜಾ	91
	ಒಟ್ಟು	**319**

ಅ) ಬಂಡಿಂಗ್ ಬೋಜಾ 2 ಪ್ರಕರಣಗಳು ಚೌಕಾಶಿಯಲ್ಲಿದೆ.

ಪ್ರಿಮಿಯಂ ಬೋಜಾದ 52 ಪ್ರಕರಣಗಳು ಚೌಕಾಶಿ ಹಂತದಲ್ಲಿದೆ.

ಬ್ಯಾಂಕ್/ಸೊಸೈಟಿ/ಬೋಜಾದ 221 ಪ್ರಕರಣಗಳನ್ನ ವಿಲೇವಾರಿಯಾಗಿದೆ.

ಇ) ವಿಳಂಬವಾಗಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಬರಗಾಲ, ಅತಿವೃಷ್ಟಿಗೆ ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ

1753 -ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇದುವರೆಗೆ ಬರಗಾಲ ಅತಿವೃಷ್ಟಿಯನ್ನು ನಿಭಾಯಿಸಲು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು).

ಆ) 30.5.99ರ ವರೆಗೆ ಜಿಲ್ಲಾವಾರು ಖರ್ಚು ಮಾಡಿದ ಹಣ ಎಷ್ಟು ಹಾಗೂ ಈಗ ಉಳಿದಿರುವ ಹಣ ಎಷ್ಟು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಅನುಬಂಧದಲ್ಲಿ ನೀಡಲಾಗಿದೆ.